

ಹೆಮ್ಮರವಾಗಿತ್ತು. ಅದರ ನೆರಳಿನಲ್ಲಿದ್ದ ಆ ಬಂಡೆಯ ಮೇಲೆ ಮಲಗಿದೆ. ಯಾರೋ ಬಂದು ನನ್ನೆದೆ ಮೇಲೆ ಕೂತರು. ಕಣ್ಣು ಬಿಟ್ಟು ನೋಡಿದೆ. ಒಂದು ಪುಟಾಣಿ ಪಕ್ಷಿ. ಇದು ಯಾವುದರ ಸಾಕ್ಷಿ?

ಮಾತುಬಾರದ ಅದು ಕೇವಲ ಧ್ವನಿ ಮಾಡಿತು. ಒಂದು ಕಾಲದಲ್ಲಿ ಮಹಾ ಮಹಾ ಕಾವ್ಯಗಳನ್ನು ಸೃಷ್ಟಿಸುತ್ತಿದ್ದ ಬೃಹತ್ ಭಾಷೆಯೊಂದು ಕ್ರಮೇಣ ಮನುಷ್ಯನಿಂದ ಸುಡಿಸಿಕೊಂಡು ಬೂದಿಯಾಗಿ ಕರಗಿಹೋದ ಗುರುತಿನಂತಿತ್ತು ಆ ಧ್ವನಿ.

ಅದು ಹಾರಿ ಹೋಗಿ ಕೊಂಬೆಯೊಂದರ ಮೇಲೆ ಕೂತಿತು. ಕೊಂಬೆಗೆ ಸಂತೋಷವಾಯಿತು. ಅದು ತನ್ನ ಗಾಳಿಯ ಸೊಂಟ ಕುಣಿಸಿತು. ನನಗೆ ನಗು ಬಂತು. ಕೊಂಬೆಯು ಪಕ್ಷಿಗೆ ತನ್ನ ಎಲೆಯ ತಲೆ ಬಾಗಿಸಿ ನಮಸ್ಕಾರ ಮಾಡಿತು. ಹೊಸ ಚಿಗುರೊಂದನ್ನು ಅದರ ಪುಕ್ಕಕ್ಕೆ ಸಿಕ್ಕಿಸಿ ಋಣ ತೀರಿಸಿದಂತೆ ಅಭಿಮಾನಪಟ್ಟಿತು. ಈಗ ಪಕ್ಷಿ ಮೇಲೆ ಹಾರಿತು. ಆಕಾಶದ ತುಂಬ ಹೊಸ ಹೊಸ ಚಿಗುರು ಚೆಲ್ಲಾಪಿಲ್ಲಿಯಾದಂತಿತ್ತು. ನಾನೂ ಕೂಡ ಆ ಪಕ್ಷಿಗೆ ಕೈ ಮುಗಿದೆ. ಅದು ಮರೆಯಾಗುವವರೆಗೂ ನೋಡಿದೆ. ಕೊಂಬೆ ಮೇಲೆ ನನಗೆ ತುಂಬಾ ಗೌರವ ಬಂತು. ಅದರ ಹತ್ತಿರ ಹೋಗಿ ಅದನ್ನು ಹಿಡಿದು ಜೋಕಾಲಿಯಾಡಿದೆ. ಯಾರೋ ನಿಜ ನಿಜ ಎಂದರು. ಯಾರದು ಮಾತಾಡಿದ್ದು ಎಂದು ನಾನು ಕೇಳಿದೆ. ನಾನೇ ಕಣಯ್ಯ ಎಂದು ಕೊಂಬೆ ನುಡಿಯಿತು. ನನಗೂ ಒಂದು ಚಿಗುರು ಕೊಡು ಎಂದು ಕೇಳಿದೆ. ನಾನೂ ನೀನೂ ಒಂದೇ ರೀತಿ ಬದುಕುತ್ತಿದ್ದೇವೆ ಆದ್ದರಿಂದ ನಿನಗೆ ಕೊಡುವುದಿಲ್ಲ ಎಂದು ಅದು ಹೇಳಿತು. ಅದು ಹೇಗೆಂದು ನಾನು ಕೇಳಿದೆ. ಅದರ ಉತ್ತರ ಹೀಗಿತ್ತು.

ಬೇರೆ ಊರಲ್ಲಿದ್ದ ಇದೇ ರೀತಿಯ ಮರವೊಂದರ ಮೇಲೆ ಒಂದು ಪಕ್ಷಿ ಬಂದು ಕೂತು ಅದರ ಹಣ್ಣನು ತಿಂದು ಈ ಊರಿಗೆ ಬಂದು ಈ ಜಾಗದಲ್ಲಿ ಪಿಚಿಗೆಯನ್ನು ಹಾಕಿತಂತೆ. ಆಗ ನಾನು ಹುಟ್ಟಿದೆ. ಅದಕ್ಕಾಗಿ ನಾನು ಈ ಪಕ್ಷಿ ಸಂತತಿಯ ಋಣವನ್ನು ಪ್ರತಿನಿತ್ಯ ಹೀಗೆ ತೀರಿಸುತ್ತಿದ್ದೇನೆ. ನೀನೂ ಕೂಡ ನನ್ನಂತೆ ಇದ್ದೀಯ, ನೀನೊಂದು ಪ್ರಾಚೀನ ಭಾಷೆಯಂತೆ ಬಳಕೆಯಿಲ್ಲದೆ ಇದ್ದೀಯ.

ಬಿದ್ದುಹೋದ ಮನೆಯೊಂದರ ಅವಶೇಷಗಳಡಿ ಸಿಲುಕಿರುವ ಪುಸ್ತಕಗಳಲ್ಲಿ ಬದುಕಿದ್ದೀಯ. ದಾರಿಹೋಕನೊಬ್ಬ ಯಾವತ್ತಾದರೂ ಮಳೆ ಬಂದಾಗ ಆ ಮನೆಯೊಳಗೆ ಹೋಗುತ್ತಾನೆ. ಆಗ ನೀನು ಸಿಗಬಹುದು. ನಾನು ನನ್ನನ್ನು ನೋಡಿಕೊಂಡೆ. ನಾ ಕೂತ ಬಂಡೆಯೇ ನನ್ನನ್ನು ನುಡಿಸುತಿದೆಯೆಂದೆನಿಸಿತು. ನಾನು ನಡೆದು ಬಂದ ದಾರಿ ಮತ್ತೆ ಬಂದು ನನ್ನನ್ನು ತುಳಿಯುತ್ತಿದೆ ಅಂದುಕೊಂಡೆ. ಬಳಕೆಯಿಲ್ಲದೆ ಮೂಲೆಗೆ ಬಿದ್ದ ಭಾಷೆಯಾದ ನಾನು, ಪಕ್ಷಿಯಂತೆ ಹಾರಿಹೋದೆ.

* * *

## ಮೂಟೆ

ನಾನು ಬಿಲದಿಂದ ಬಂದ ಮೂಟೆ. ನನ್ನ ತಲೆ ಮೇಲೆ ಹೊಲದಿಂದ ಬಂದ ಮೂಟೆ. ಹೊಲದಲ್ಲೇ ಓಡಾಡಿ ಮತ್ತೆ ಹೊಲದಲ್ಲೇ ಸುರಿದೆ. ಅದರ ಮೇಲೆ ಮಲಗಿದೆ. ನಾಳೆ ಕಾಳೆಲ್ಲ ತೆಗೆದು ಬೆಂಡು ಬೆಂಕಿಗಿಡುವವನು ಬರುತ್ತಾನೆ. ಬೆಂಡುಗಳನು ಸುಣ್ಣ ಸುಡುವವರು